## ಆನ್‌ಲೈನ್ ಸಂಖ್ಯಾಶಾಸ್ತ್ರ

ಆನ್‌ಲೈನ್ ಕ್ಲಾಸಿನಲ್ಲಿ ಪುಟ್ಟ ವೆಂಕನಿಗೆ 1ರಿಂದ 100ರ ತನಕ ಅಂಕಿಗಳನ್ನು ಹೇಳಿಕೊಡಲಾಗಿತ್ತು. ಆದರೆ, ಅವನು 55ರ ಅನಂತರ ನೇರವಾಗಿ 76 ಎಂದು ಹೇಳುತ್ತಿದ್ದ. ಎಷ್ಟು ಸಲ ತಿದ್ದಿದರೂ ಆತ 55ರಿಂದ 76ರ ನಡುವಿನ ಅಂಕಿಗಳನ್ನು ಹೇಳಲಿಲ್ಲ. ಕ್ಲಾಸ್ ಮುಗಿದ ಮೇಲೆ ಟೀಚರ್ ಅವನ ತಾಯಿಗೆ ಫೋನ್ ಮಾಡಿ, 'ನಿಮ್ಮ ಮಗ ಎಷ್ಟು ಹೇಳಿದರೂ 55 ಆದ ಮೇಲೆ 76 ಎಂದು ಹೇಳುತ್ತಾನೆ, ಯಾಕೆ?' ಎಂದು ಕೇಳಿದರು. ಅವರ ತಾಯಿ, 'ನೀವು 55ನೇ ನಂಬರ್ ಕಲಿಸುತ್ತಿರುವಾಗ ನೆಟ್‌ವರ್ಕ್ ಹೋಗಿದ್ದು 76 ಕಲಿಸುತ್ತಿರುವ ವೇಳೆಗೆ ಬಂತು, ಆದಕ್ಕೆ' ಎಂದರು.

**ವಿದ್ಯಾ ಎಸ್. ಪೈ**





## 'ಹೊರಗಿನದನ್ನು ತಿನ್ನಬೇಡ...'

ಅಣ್ಣ ರಾಮ ಹಾಗೂ ತಮ್ಮ ಶ್ಯಾಮ ಸಮೋಸಾ ತರಿಸಿಕೊಂಡು ತಿನ್ನುತ್ತಿದ್ದರು. ಆಗ ರಾಮ ಸಮೋಸಾದ ಹೊರಗಿನದನ್ನು ಬಿಟ್ಟು ಬರೀ ಒಳಗಿನ ಪಲ್ಯವನ್ನು ಮಾತ್ರ ತಿನ್ನುತ್ತಿದ್ದ. ಶ್ಯಾಮ ಕೇಳಿದ, 'ಯಾಕೊ ಹಾಗೆ ಅರ್ಧಂಬರ್ಧ ತಿನ್ನುತ್ತಿದ್ದೀಯ?' ಎಂದು. ರಾಮ, 'ಅಮ್ಮ ಹೇಳಿದ್ದಾಳೆ, ಹೊರಗೆ ಕೊರೊನಾ ಇದೆ. ಹೊರಗಿನ ಯಾವ ವಸ್ತುವನ್ನೂ ತಿನ್ನಬೇಡ ಅಂತ' ಎಂದು ಹೇಳಿ ತಾನು ತಿನ್ನುವುದನ್ನು ಮುಂದುವರಿಸಿದ.

**ಶೋಭಾ ಪ್ರಮೋದ್**

ಕಲೆ: ಗಣೇಶ ಆಚಾರ್ಯ